ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 11/03/2020

# ರಿಜ್ವಾನ್ ಕೇಸ್: ಕಟೀಲ್‌ಗೆ ಜಾಮೀನು



**• ಕನ್ನಡಪ್ರಭ ವಾರ್ತೆ** ಬೆಂಗಳೂರು

ಲೋಕಸಭೆ ಚುನಾವಣೆ ವೇಳೆ ತಮ್ಮ ವಿರುದ್ಧ ಮಾಡಿದ ಆರೋಪವನ್ನು ಪ್ರಶ್ನಿಸಿ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಮಾನ ನಷ್ಟ ಮೊಕದ್ದಮೆ ದಾಖಲಿಸಿದ ಪ್ರಕರಣ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್‌ರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಮಂಗಳವಾರ ವಿಚಾರಣೆಗೆ ನಳಿನ್ ಕುಮಾರ್ ಹಾಜರಾಗಿದ್ದರು. ಕೋರ್ಟ್ ವೈಯಕ್ತಿಕ 50 ಸಾವಿರ ರು. ಬಾಂಡ್ ಮತ್ತು 25 ಸಾವಿರ ರು. ನಗದನ್ನು ಭದ್ರತೆ ಠೇವಣಿಯನ್ನಾಗಿ ಇಡಬೇಕು ಎಂದು ಹೇಳಿ ಜಾಮೀನು ಮಂಜೂರು ಮಾಡಲಾಯಿತು. ಮುಂದಿನ ವಿಚಾರಣೆ ಏ.15ಕ್ಕೆ ಡೆಯಲಿದೆ.

ಲೋಕಸಭೆ ಚುನಾವಣೆ ವೇಳೆ ಬೆಂಗಳೂರು ಕೇಂದ್ರ ಕ್ಷೇತ್ರದ ಅಭ್ಯರ್ಥಿಯಾಗಿದ್ದ ರಿಜ್ವಾನ್ ಅರ್ಷದ್ ವಿರುದ್ಧ ಬಿಜೆಪಿ ಟ್ವೀಟ್ ಮಾಡಿತ್ತು. ನಕಲಿ ಗುರುತಿನ ಚೀಟಿಗಳನ್ನು ಮುದ್ರಿಸುವ ವೇಳೆ ಕಾಂಗ್ರೆಸ್‌ನ ಇಬ್ರಾಹಿಂ ಕಲೀಲುಲ್ಲಾ ಅವರನ್ನು ಬಂಧಿಸಲಾಗಿದೆ. ಅಲ್ಲದೇ, ನಕಲಿ ಮತದಾರರ ಚೀಟಿ ಮುದ್ರಿಸಿದ್ದಕ್ಕೆ 18 ಜನರನ್ನು ಬಂಧಿಸಲಾಗಿದೆ. ಬೆಂಗಳೂರು ಕೇಂದ್ರ ಅಭ್ಯರ್ಥಿ ರಿಜ್ವಾನ್ ಈ ದಂಧೆ ಹಿಂದಿದ್ದಾರೆಂದು ಟ್ವೀಟ್ ಮಾಡಿದ್ದರ ವಿರುದ್ಧ ರಿಜ್ವಾನ್ ಕೋರ್ಟ್ ಮೆಟ್ಟಿಲೇರಿದ್ದರು.